ಕಡಿದು ಸಾಯುತ್ತಾನೆ. ಅವನ ಸಾವಿಗೆ ದುಃಖಿಸುವವರು ಯಾರೂ ಇಲ್ಲ. ಯಜಮಾನನ 'ವಸೂಲಾಗದ ಲೆಕ್ಕ'ದ ನಮೂದಲ್ಲಷ್ಟೇ ಸುಬ್ಬನ ಸಾವಿಗೆ ಕಿಮ್ಮತ್ತಿದೆ. ಕುವೆಂಪು ಅವರ ಪುಟ್ಟ ಕಥೆಯೊಂದು ಸಿನಿಮಾ ರೂಪದಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

'ಮುನ್ನೀಫ' ಚಿತ್ರದ ಬಸವನ ಕಥೆ ಸಂಕೀರ್ಣವಾದುದು. ಬರ ಬಿದ್ದ ನೆಲದಿಂದ ವ್ಯಕ್ತಿಯೊಬ್ಬ ತನ್ನ ಮಗ ಬಸವ ಹಾಗೂ ಬಸವಣ್ಣನ(ಎತ್ತು) ಜೊತೆ ಬದುಕು ಅರಸಿಕೊಂಡು ಹೊರಡುತ್ತಾನೆ. ದಾರಿಯಲ್ಲಿ ಉಳ್ಳವರ ಮನೆತನದ ಹೆಣ್ಣುಮಗಳೊಬ್ಬಳು ಬಸವನನ್ನು ತನ್ನ ಮಡಿಲು ತುಂಬುವಂತೆ ಕೇಳಿಕೊಳ್ಳುತ್ತಾಳೆ. ಕರುಳಕುಡಿಯಾದರೂ ಬದುಕಿಕೊಳ್ಳಲಿ ಎಂದು ಅಪ್ಪ ಮಗನನ್ನು ಬಿಟ್ಟು ದೇಶಾಂತರ ಹೋಗುತ್ತಾನೆ. ಆ ಬಸವನೇ ಸುಂದರಪ್ಪನಾಗುತ್ತಾನೆ, ಅಕ್ಷರ ಕಲಿತು ಮುನ್ನೀಫನಾಗುತ್ತಾನೆ. ಈ ಮುನ್ನೀಫನಿಗೆ ಸಾಂಪ್ರದಾಯಿಕ ನ್ಯಾಯಾಂಗ ವ್ಯವಸ್ಥೆಯಲ್ಲಿ ಅಷ್ಟೇನೂ ವಿಶ್ವಾಸವಿಲ್ಲ. ಸತ್ಯವನ್ನು ಕಾಣಬೇಕಾದರೆ, ಅಂತರಂಗದ ಕಣ್ಣೂ ಬೇಕು ಎನ್ನುವುದು ಆತನ ನಂಬಿಕೆ. ಕೆಲವೊಮ್ಮೆ ಸಾಕ್ಷಿ – ಕಟ್ಟಲೆಗಳ ಮಾರ್ಗ ಬಿಟ್ಟು, ತನ್ನದೇ ಆದ ನ್ಯಾಯದ ದಾರಿಯನ್ನು ಸುಂದರಪ್ಪ ಹಿಡಿಯುತ್ತಾನೆ. ಈ ಮೂಲಕ ವಕೀಲರ ಕೆಂಗಣ್ಣಿಗೆ ಹಾಗೂ ಪ್ರಭುತ್ವದ ಅವಕೃಪೆಗೆ ಪಾತ್ರವಾಗಬೇಕಾಗುತ್ತದೆ. ಹಸುವಿನ ಮಾಲೀಕತ್ವದ ದಾವೆ ಪರಿಹರಿಸಲು ಹೋದ ಅವನಲ್ಲಿ ಹಸು ಸಾಕುವ ಆಸೆ ಹುಟ್ಟಿಕೊಳ್ಳುತ್ತದೆ. ಅದರ ಪರಿಣಾಮವಾಗಿ, ಮನೆಗೆ ಹೊಂದಿಕೊಂಡಂತೆ ಕೊಟ್ಟಿಗೆಯೊಂದು ರೂಪುಗೊಳ್ಳುತ್ತದೆ. ಮುನ್ನೀಫನ ಹೆಂಡತಿಗೆ ಗಂಡನದು ವಿಚಿತ್ರ ವರ್ತನೆ ಎನ್ನಿಸಿದರೂ ಆಕೆ ಪ್ರತಿಯಾಡುವುದಿಲ್ಲ. ಆದರೆ, ಕೆಲಸ ಕಳೆದುಕೊಂಡ ಮನೆ ಸೇರಿದಾಗ ಗಂಡನ ವರ್ತನೆ ಆಕೆಗೆ ಹುಚ್ಚಾಟ ಎನ್ನಿಸುತ್ತದೆ. ಸುಂದರಪ್ಪ ಕೊಟ್ಟಿಗೆಯಲ್ಲೇ ಹೆಚ್ಚು ಕಾಲ ಕಳೆಯತೊಡಗುವುದನ್ನು ಸಹಿಸಿಕೊಳ್ಳುವುದು ಕಷ್ಟವಾದಾಗ, ಆಕೆ ಗಂಡನಿಗೆ ತಿಳಿಯದಂತೆ ಹಸುಗಳನ್ನು ಮಾರಿಬಿಡುತ್ತಾಳೆ. ಹಸುಗಳ ಅಗಲಿಕೆಯಿಂದ ಮಾನಸಿಕವಾಗಿ ಕುಸಿಯುವ ಸುಂದರಪ್ಪ ಹಾಸಿಗೆ ಹಿಡಿಯುತ್ತಾನೆ. ಈ ಸಂದರ್ಭದಲ್ಲಿ ಸುಂದರಪ್ಪನ ವ್ಯಕ್ತಿತ್ವ ಕ್ಷೀಣಿಸತೊಡಗಿ, ಅವನೊಳಗಿನ ಬಸವ ಮತ್ತೆ ಜೀವಗೊಳ್ಳತೊಡಗುತ್ತಾನೆ. ಬಸವ– ಸುಂದರಪ್ಪರ ಕಣ್ಣಾಮುಚ್ಚಾಲೆಯಲ್ಲೇ ಅವಸಾನ ಸಂಭವಿಸುತ್ತದೆ. ಇದಿಷ್ಟು ಮುನ್ನೀಫನ, ಸಮಾಜದ ಕಣ್ಣಿನಲ್ಲಿನ ಹುಚ್ಚ ಮುನ್ನೀಫನ ಕಥೆ.

ಸುಬ್ಬ ಮತ್ತು ಬಸವನ ಬದುಕುಗಳು ಬೇರೆಬೇರೆಯಾದರೂ ಆ ಪಾತ್ರಗಳ ಕೇಡಿಗೆ ಕಾರಣವಾದ ಸಂಗತಿಗಳಲ್ಲಿ ಸಾಮ್ಯತೆಯಿದೆ. ಗ್ರಾಮಭಾರತದಲ್ಲಿನ ಜಾತೀಯತೆ, ಅನಕ್ಷರತೆಯಿಂದ ಉಂಟಾಗುವ ಅಮಾಯಕತೆ ಹಾಗೂ ಶೋಷಣೆಗೆ ಒದಗಿಬರುವ ಸಾಕ್ಷರತೆ, ಸಮಾಜದಲ್ಲಿನ ಮೌಢ್ಯ – ಇವೆಲ್ಲವೂ ಎರಡೂ ಸಿನಿಮಾಗಳಲ್ಲಿವೆ. 'ಮುನ್ನೀಫ' ಮತ್ತು 'ಸಾಲದ ಮಗು' ಚಿತ್ರಗಳು ನಮ್ಮ ಶಿಕ್ಷಣ ವ್ಯವಸ್ಥೆಯ ಕುರಿತು ಎತ್ತುವ ಪ್ರಶ್ನೆಗಳು ಮಹತ್ವವಾದವು ಹಾಗೂ ಶಿಕ್ಷಣದ ಕುರಿತ ನಮ್ಮ ನಂಬಿಕೆಗಳನ್ನೇ ಬುಡಮೇಲು ಮಾಡುವಂತವು. ಮಕ್ಕಳ ಮನಸ್ಸನ್ನು ಅರಳಿಸಬೇಕಾದ ಶಿಕ್ಷಣ 'ಸಾಲದ ಮಗು' ಚಿತ್ರದಲ್ಲಿ ಹಿಂಸೆಯಾಗಿ ಪರಿಣಮಿಸುತ್ತದೆ. ಅಕ್ಷರ ತಿದ್ದುವ ಯಾಂತ್ರಿಕ ಕಲಿಕೆಗಿಂತಲೂ ನಿಸರ್ಗದ ಶಾಲೆಯಲ್ಲಿನ ಕಲಿಕೆಯೇ ಇಲ್ಲಿ ಮುಖ್ಯವೆನ್ನಿಸುತ್ತದೆ. ಸುಬ್ಬನ ಈಜುವಿಕೆಯಲ್ಲಿ ಕೂಡ ಕಲಿಕೆಯ ಕ್ರಮವೊಂದನ್ನು ಸಿನಿಮಾ ಸೂಚಿಸುತ್ತದೆ.

ವಿದ್ಯೆ ಬದುಕಿನಲ್ಲಿ ಬೆಳಕನ್ನು ಮೂಡಿಸುವ ರೂಪಕ. ಅಕ್ಷರಗಳ ಸಖ್ಯ ವ್ಯಕ್ತಿಯ ಪಾಲಿಗೆ, ಸಮುದಾಯದ ಪಾಲಿಗೆ ಬಿಡುಗಡೆಯ ರೂಪದಲ್ಲಿ ಪರಿಣಮಿಸುತ್ತದೆ. ಆದರೆ, 'ಸಾಲದ